ಶಕ್ತಿ ಮಣ್ಣಿಗೆ ಮಾತ್ರವೇ ಇದೆ. ದೈನಂದಿನ ಕೆಲಸಗಳನ್ನು ಮುಗಿಸಿ, ಮುಂದಿನ ಕೆಲಸ ಕಾರ್ಯಗಳ ಬಗ್ಗೆ ಆಲೋಚಿಸೋಣ...' ಎಂದು ದುಃಖದಿಂದ ಹೊರಬಂದು ದೃಢವಾಗಿ ಹೇಳಿ ತಮ್ಮ ಕೊಠಡಿಯ ಕಡೆಗೆ ನಡೆದರು. ನಾನು ನನ್ನ ರೂಮಿಗೆ ಹೊರಟು ಸ್ನಾನ ಮಾಡಿ ಬಂದಿದ್ದೆ. ಸ್ನಾನ ಮಾಡುವಾಗಲೂ ಹೊರಗಿನ ನೀರಿನ ಸದ್ದು ನಾನು ಪ್ರವಾಹವೊಂದರಲ್ಲಿ ಸಿಲುಕಿರುವೆನೇನೋ ಎಂಬ ಭ್ರಮೆಗೆ ಸಿಲುಕಿರುವಂತೆ ಮಾಡಿತ್ತು. ನಾನು ರೂಮಿನಿಂದ ಹೊರಬಂದಾಗ ಸುಮಾರು ಜನ ನೆಲದ ಮೇಲೆ ಕುಳಿತು ಬಾಳೆಲೆಯಲ್ಲಿ ತಿಂಡಿ ತಿನ್ನುತ್ತಿರುವುದು ಕಂಡುಬಂದಿತ್ತು. ಭಗವಾನ್ ಕುಟ್ಟಿ ಬಂದು ತಿಂಡಿ ತಿನ್ನಲು ನನ್ನನ್ನು ಡೈನಿಂಗ್ ಟೇಬಲ್ಲಿಗೆ ಬರುವಂತೆ ಹೇಳಿದ್ದ. ನಾನು ನೆಲದ ಮೇಲೆಯೇ ಕುಳಿತು ತಿನ್ನುವುದಾಗಿ ಹೇಳಿ ಕುಳಿತುಕೊಂಡಿದ್ದೆ. ಯಾರೋ ಬಾಳೆಲೆಯಲ್ಲಿ ಬಿಸಿ ಬಿಸಿತಿಂಡಿಯನ್ನು ಹಾಕಿಕೊಂಡು ಬಂದು ನನ್ನ ಮುಂದಿಟ್ಟಿದ್ದರು.

'ಇವೊತ್ತು ಕಾಮನ್ ತಿಂಡಿ ತರಕಾರಿ ಪಲಾವ್, ಹೊಟ್ಟೆ ತುಂಬಾ ತಿಂದು ಬಿಡಿ. ನಯ್ಯಾರ್ ಇನ್ನೂ ಸ್ನಾನ ಮಾಡುತ್ತಿದ್ದಾರೆ. ಬಿಡುವಿಲ್ಲದ ಫೋನುಗಳು. ಸಿಎಂ ಸಾಹೇಬರು ಕೂಡ ಫೋನ್ ಮಾಡಿದ್ದರು. ಪ್ರವಾಹ ಕಡಿಮೆಯಾಗುತ್ತಲೇ ಏನೇನು ಪರಿಹಾರ ಕಾರ್ಯಗಳನ್ನು ಕೈಗೊಳ್ಳಬೇಕೆಂಬುದರ ಬಗ್ಗೆ ಚರ್ಚಿಸಿರಬೇಕು. ಹೋದ ವರ್ಷ ಪ್ರವಾಹ ಬಂದಾಗಲೂ ನಯ್ಯಾರ್ ಬಿಡುವಿಲ್ಲದೆ ಓಡಾಡಿದ್ದರು. ಆಗ ಜೊತೆಯಲ್ಲಿ ಮಾಧವನ್ ಪಿಳ್ಳೈ, ಅರುಂಧತಿ ಪಿಳ್ಳೈ ಇದ್ದರು. ಓಹ್! ಆ ಹುಡುಗಿ ಅರುಂಧತಿ ಪಿಳ್ಳೈ ಅಂತೂ ಗಂಡು ಹುಡುಗರಿ ಗಿಂತಲೂ ಮಿಗಿಲಾಗಿ ಓಡಾಡಿ ಪ್ರವಾಹ ಪೀಡಿತರಿಗೆ ನೆರವಾಗಿದ್ದಳು. ಅವಳ ಧೈರ್ಯ ಅಂತಃಕರಣ ಮೆಚ್ಚಿ ಪ್ರತಿಯೊಬ್ಬರೂ ಸೈ ಅನ್ನುತ್ತಿದ್ದರು...' ಒಮ್ಮೆಗೆ ಗಂಟಲುಬ್ಬಿ ಭಗವಾನ್ ಕುಟ್ಟಿಯ ಬಾಯಿಂದ ಮಾತುಗಳು ನಿಂತು ಕಣ್ಣಲ್ಲಿ ಬುಳಬುಳನೆ ನೀರು ಧುಮುಕಿದ್ದವು. ತಿಂಡಿ ತಿನ್ನುತ್ತಲೇ ನನ್ನ ಕಣ್ಣುಗಳೂ ಹನಿಗೂಡಿದ್ದವು. ಭಗವಾನ್ ಕುಟ್ಟಿ ಇನ್ಯಾರಿಗೋ ತಿಂಡಿ ಕೊಡಲು ಆ ಕಡೆ ನಡೆದಿದ್ದ.

ನಾನು ತಿಂಡಿ ಮುಗಿಸಿ ನನ್ನ ಕೋಣೆಗೆ ಹಿಂತಿರುಗಿ ಕಾಕಿಗಡ್ಡ ರಾಘವರೆಡ್ಡಿಗೆ ಫೋನ್ ಮಾಡಿದ್ದೆ. 'ಹಲೋ ನಾನೇ ಫೋನ್ ಮಾಡ್ಬೇಕು ಅಂತಿದ್ದೆ, ಅಷ್ಟರಲ್ಲಿ ನೀನೆ ಮಾಡ್ದೆ ನೋಡು. ಹೇಗಿದೆ ಸಿಚುಯೇಷನ್ ಅಲ್ಲಿ...' ಎಂದ ರಾಘವರೆಡ್ಡಿಗೆ, 'ತುಂಬಾ ಡೇಂಜರಸ್ ಪರಿಸ್ಥಿತಿ ಇದೆ. ಸದ್ಯಕ್ಕೆ ನಾವಿರುವ ಜಾಗ ಸೇಫಾಗಿದೆ. ತುಂಬಾ ಸ್ಯಾಡ್ ನ್ಯೂಸ್ ಅಂದ್ರೆ ರಾತ್ರಿಯ ಪ್ರವಾಹದಲ್ಲಿ ಮಾಧವನ್ ಪಿಳ್ಳೈ ಮನೆ, ತೋಟ ಸಂಪೂರ್ಣವಾಗಿ ಕೊಚ್ಚಿ ಹೋಗಿವೆ. ಅವುಗಳೊಂದಿಗೆ ಮಾಧವನ್ ಪಿಳ್ಳೈ, ಅರುಂಧತಿ ಪಿಳ್ಳೈ ಕೂಡ ಕೊಚ್ಚಿ ಹೋಗಿದ್ದಾರೆ...'. ನನ್ನ ಮಾತುಗಳನ್ನು ತುಂಡರಿಸಿ, 'ಓ ಮೈ ಗಾಡ್ ಎಂಥಾ ದುಃಖಕರ ಸಂಗತಿ. ನೀನೇನಾದರೂ ರಾತ್ರಿ ಅಲ್ಲಿಯೇ ಉಳಿದಿದ್ದರೆ... ದೇವರೇ ಊಹಿಸಿಕೊಳ್ಳಲೂ ಸಾಧ್ಯವಾಗುತ್ತಿಲ್ಲ ನನಗೆ' ರಾಘವರೆಡ್ಡಿಯ ಧ್ವನಿ ನಡುಗುತ್ತಿತ್ತು. 'ಅಲ್ಲೇ ಉಳಿದಿದ್ದರೆ ಈಗ ನಿನ್ನೊಂದಿಗೆ ಮಾತನಾಡಲಾಗುತ್ತಿರಲಿಲ್ಲ...' ತಣ್ಣಗೆ ಹೇಳಿದ್ದೆ.

'ಇನ್ನೂ ಮೂರು ದಿನ ಬಿಗಡಾಯಿಸಿದ ಪರಿಸ್ಥಿತಿಯೇ ಇರುತ್ತದೆ ಅನ್ನಿಸುತ್ತದೆ ಅಲ್ಲಿ. ಒಂದು ಕೆಲಸ ಮಾಡೋಣವಾ...' ಎಂದಿದ್ದ.

'ಏನು?' ಕೇಳಿದ್ದೆ ನಾನು.

'ನಾನು ಇಲ್ಲಿಂದ ಸೀದಾ ದಿಲ್ಲಿಗೆ ಹೋಗ್ಬಿಡ್ತೀನಿ. ಏರ್ ಸರ್ವೀಸ್ ಶುರುವಾದ ಮೇಲೆ ನೀನೂ ಅಲ್ಲಿಂದ ದಿಲ್ಲಿಗೆ ಬಂದುಬಿಡು. ಮಾಧವನ್ ಪಿಳ್ಳೈ, ಅರುಂಧತಿ ಪಿಳ್ಳೈಯರನ್ನು ಕಳೆದುಕೊಂಡದ್ದಂತೂ ನನ್ನನ್ನು ವಿಪರೀತ ಕಂಗೆಡಿಸಿದೆ. ನಾನು ಅಲ್ಲಿಗೆ ಹೋದಾಗಲೆಲ್ಲ ಎಷ್ಟು ಚೆನ್ನಾಗಿ ನೋಡಿಕೊಳ್ಳುತ್ತಿದ್ದರು! ಆದರೂ ವರ್ತಮಾನದ ಸತ್ಯಗಳನ್ನು ಒಪ್ಪಿಕೊಳ್ಳಬೇಕಲ್ವಾ. ದೇವರು ಅವರಿಗೆ ಸದ್ಗತಿ ನೀಡಲೆಂದು ಪ್ರಾರ್ಥಿಸುವುದನ್ನು ಬಿಟ್ಟರೆ ನಾವಿನ್ನೇನನ್ನು ತಾನೆ ಮಾಡಲು ಸಾಧ್ಯ? ಹೇಗಾದರಾಗಲಿ ನೀನು ಹುಷಾರಾಗಿರು. ಸಾಧ್ಯವಾದರೆ ರಾತ್ರಿಗೆ ಫೋನ್ ಮಾಡು' ಎಂದು ಮಾತು ಮುಗಿಸಿದ್ದ. ರೆಸ್ಟ್ ರೂಮಿಗೆ ಹೋಗಿ ರೀಸಸ್ ಮಾಡಿ ಬಂದು ಸೋಫಾದ ಮೇಲೆ ಕುಳಿತಿದ್ದೆ. ಹೊರಗೆ ಹರಿಯುತ್ತಿದ್ದ ನೀರಿನ ರಭಸ ಕಡಿಮೆಯಾಗುತ್ತಿರುವುದು ಸದ್ದಿನ ಲಯದಿಂದಲೇ ತಿಳಿಯುತ್ತಿತ್ತು. ಫೋನ್ ರಿಂಗಾಗುವುದರೊಂದಿಗೆ ಡಾ. ಆಶಾ ಬೆಂಗತಮಲೆ ಎಂಬ ಹೆಸರು ಡಿಸ್‌ಪ್ಲೇ ಆಗುವುದರೊಂದಿಗೆ ಹೊಟ್ಟೆಯಲ್ಲಿ ಒಂಥರಾ ಸಂಕಟ ಶುರುವಾಗಿತ್ತು. ಆದರೂ ರಿಸೀವ್ ಮಾಡಿಕೊಳ್ಳದೆ ಗತ್ಯಂತರವಿರಲಿಲ್ಲ. ಏಕೆಂದರೆ, ಆ ಹೆಸರು ನನ್ನ ಹೆಂಡತಿಯದ್ದು. ಸುಮಾರು ಸಾರಿ ರಿಂಗ್ ಆದ ಮೇಲೆ 'ಹಲೋ' ಎಂದಿದ್ದೆ. 'ಏನು ಅಷ್ಟೊಂದು ಬಿಜೀನಾ, ಇಲ್ಲ ನನ್ನ ಮನಸ್ಸಿನಲ್ಲಿ ಇರೋದನ್ನ ಫೋನ್ ರಿಂಗ್ ಸೌಂಡ್ ಮೂಲಕಾನೇ ತಿಳ್ಕೊಂಡು ಮಾತನಾಡೋಣ ಅಂತಾನೋ. ಎಷ್ಟಾದರೂ ಪ್ರಸಿದ್ಧ ಮನಃಶಾಸ್ತ್ರಜ್ಞ ಅಲ್ಲವಾ. ಜಗತ್ತಿನ ಎಲ್ಲಾ ಮನಃಶಾಸ್ತ್ರಜ್ಞರಿಗೂ ಅಷ್ಟೇ, ಬೇರೆ ವ್ಯಕ್ತಿಗಳ ಮನಸ್ಸುಗಳನ್ನು ಸುಲಭವಾಗಿ ತಿಳಿದುಕೊಂಡಂತೆ ತಮ್ಮ ಸ್ವಂತ ಹೆಂಡತಿಯರ ಮನಸ್ಸುಗಳನ್ನು ಅರಿಯಲಾಗುವುದಿಲ್ಲ. ಅದಿರಲಿ, ನಾಡಿದ್ದು ನೆನಪಿದೆಯಲ್ಲಾ ಫೈನಲ್ ಹಿಯರಿಂಗ್. ಕೋರ್ಟಿನಲ್ಲಿ ಇಬ್ಬರೂ ಪ್ರೆಸೆಂಟ್ ಇರಬೇಕು. ಸದ್ಯ ನಿನ್ನಿಂದ ಬಿಡಿಸಿಕೊಂಡು ನಿರಾಳವಾಗಿಬಿಡ್ತೀನಿ...' ಒಂದೇ ಸಮನೆ ಮಾತನಾಡುತ್ತಿದ್ದವಳ ಮಾತುಗಳಿಗೆ ತಡೆ ಹಾಕಲೆನ್ನುವಂತೆ, 'ನಾನು ಕೇರಳದ ಎರ್ನಾಕುಲಂನಲ್ಲಿದ್ದೀನಿ. ರಾತ್ರಿಯ ಕುಂಭ ದ್ರೋಣ ಮಳೆಯಿಂದಾಗಿ ನಾನಿರುವ ಜಾಗ ಜಲಾವೃತವಾಗಿದೆ. ಬಸ್, ಟ್ರೈನ್, ಫ್ಲೈಟ್ ಏನೂ ಇಲ್ಲ. ನಾರ್ಮಲ್ ಸಿಚುಯೇಷನ್‌ಗೆ ಮರಳಲು ನಾಲ್ಕೈದು ದಿನ ಆಗಬಹುದು ಅನ್ನಿಸ್ತದೆ. ಯಾವುದಾದರೂ ಟೀವಿ ಚಾನೆಲ್ ಹಾಕು, ಗೊತ್ತಾಗುತ್ತದೆ. ನನ್ನ ಲಾಯರ್ ಪರಶಿವ ಮೂರ್ತಿ ಹತ್ರ ಮಾತನಾಡ್ತೀನಿ. ಬೇಕಾದ್ರೆ ಡಿಜಿಟಲ್ ಸಿಗ್ನೇಚರ್ ಕಳಿಸ್ತೀನಿ. ಅವರು ಮ್ಯಾನೇಜ್ ಮಾಡ್ತಾರೆ. ನಂಗೂ ಇದನ್ನ ಪ್ರೊಸೀಡ್ ಮಾಡೋ ಇಷ್ಟ ಇಲ್ಲ...' ಎಂದು ತಣ್ಣಗೆ ಮಾತನಾಡಿದ್ದೆ.

'ಥೂ ಪ್ರಜ್ಞೆ ಇರಬೇಕು ಮನುಷ್ಯನಿಗೆ. ಗೊತ್ತಿದ್ರೂ ಹೋಗಿದ್ದೀಯ ಅಂದ್ರೆ ಉದ್ದೇಶಪೂರ್ವಕವಾಗಿಯೇ ಹೋಗಿದ್ದೀಯ ಎಂದೇ ಅರ್ಥ...' ಅವಳು ತಾಳ್ಮೆ ಕಳೆದುಕೊಳ್ಳುತ್ತಿದ್ದಳು. 'ಹೆಂಗಂದ್ರಂಗೆ ಮಾತಾಡ್ಬೇಡ. ನನ್ನ ಲಾಯರ್ ಹತ್ರ ಮಾತಾಡಿ ನಿಂಗೇನು ಬೇಕು ಅದನ್ನ ಅರೆಂಜ್ ಮಾಡಿಸ್ತೀನಿ. ಇಲ್ಲಾ ಮುಂದಿನ ವಾರ ಬಂದು ಗಟ್ಟಿಯಾಗಿ ಕೂತು ಡೈವೋರ್ಸ್ ಸರ್ಟಿಫಿಕೇಟ್ ನಿನ್ನ ಮುಂದಿಟ್ಟು ಕೈ ಮುಗಿತೀನಿ...' ನಾನು ಖಾರವಾಗಿಯಾದರೂ ನಿಧಾನಕ್ಕೆ ಹೇಳಿದ್ದೆ. ಅವಳು ನನಗಿಂತಲೂ ಎರಡು ವರ್ಷ ದೊಡ್ಡವಳಾದ್ದರಿಂದ ನಾನು ಗಂಡನಾಗಿದ್ದರೂ ಏಕವಚನದಲ್ಲೇ ಮಾತನಾಡುತ್ತಿದ್ದಳು. ಅದರ ಬಗ್ಗೆ ನನಗೆ ಬೇಸರವೇನೂ ಇಲ್ಲ.

'ಮುಂದಿನ ತಿಂಗಳು ಜಾಬ್ ಮಾಡೋದಕ್ಕೆ ಆಸ್ಟ್ರೇಲಿಯಾಗೆ ಹೋಗ್ಬೇಕು. ಎಲ್ಲಾ ರೆಡಿಯಾಗಿದೆ, ಫ್ಲೈಟ್ ಟಿಕೆಟ್ ಕೂಡಾ. ನನ್ನ ಕನಸುಗಳಿಗೆ ಬೆಂಕಿ ಇಡಬೇಡ ಮತ್ತೆ...' ಅವಳು ಮತ್ತದೇ ಧಾಟಿಯಲ್ಲಿ ಮಾತನಾಡಿದ್ದಳು.

'ಯಾರ ಕನಸುಗಳಿಗೆ ಯಾರೂ ಬೆಂಕಿಯಿಡಲಾಗುವುದಿಲ್ಲ. ನಮ್ಮ ಕನಸುಗಳನ್ನು ಸುಡುವ ಬೆಂಕಿ ನಮ್ಮ ದೇಹ ಮತ್ತು ಮನಸ್ಸುಗಳಿಂದಲೇ ಉತ್ಪತ್ತಿಯಾಗುತ್ತದೆಂಬುದನ್ನು ಮರೆಯಬೇಡ. ನಿನ್ನ ಹತ್ತಿರ ಮಾತನಾಡಿ ಫಲವೇನು. ಖಂಡಿತಾ ನಿನಗೆ ಒಂದಿಷ್ಟೂ ತೊಂದರೆಯಾಗದಂತೆ ನಾನು ನೋಡ್ಕೊತೀನಿ. ಮತ್ತು ನಿನ್ನನ್ನು ನಂಬಿಸಲಿಕ್ಕೂ ಪ್ರಯತ್ನಿಸುವುದಿಲ್ಲ. ಈ ಐದು ವರ್ಷಗಳಿಂದ ನೀನು ನನ್ನನ್ನು ಬಲ್ಲೆ, ನಾನು ನಿನ್ನನ್ನು ಬಲ್ಲೆ...' ಮತ್ತೆರಡು ಮಾತುಗಳನ್ನು ನಾನು ಮಾತನಾಡುವವನಿದ್ದೆ, ಆದರೆ ಆ ಕಡೆಯಿಂದ ಆಶಾ ಬೆಂಗತಮಲೆ ಫೋನ್ ಕಟ್ ಮಾಡಿದ್ದಳು. ಅಪರಿಚಿತ ದೇಹಗಳು ಒಂದನ್ನೊಂದು ಆಕರ್ಷಿಸುವಂತೆ ಪರಿಚಿತ ದೇಹಗಳೂ ಕೂಡ ಎಷ್ಟೇ ಸುಂದರವಾಗಿದ್ದರೂ ಒಂದನ್ನೊಂದು ಸಹಿಸಿಕೊಳ್ಳದೆ ಅಸಹ್ಯದಿಂದ ದೂರವಾಗಲು ಬಯಸುವುದು ಕೂಡ ಜೀವ ಜಗತ್ತಿನ ಒಂದು ವಿಸ್ಮಯದ ಸಂಗತಿ. ದೇಹಗಳ ಆಕರ್ಷಣೆಯಂತೆ ದೇಹಗಳ ವಿಕರ್ಷಣೆ ಕೂಡ ಸಾಧ್ಯವಾಗುವುದು ಏಕತಾನತೆಯ ಫಲದಿಂದಾಗಿಯೇ. ನಿರಂತರವಾಗಿ ಜೊತೆಯಲ್ಲಿರುವ ದೇಹಗಳು ಕಾಲಕ್ರಮೇಣ ಪರಸ್ಪರ ಆಕರ್ಷಣೆಯನ್ನು ಕಳೆದುಕೊಳ್ಳುವುದು ಜೀವಜಗತ್ತಿನ ಎಲ್ಲಾ ಪ್ರಭೇದಗಳ ಸಾಮಾನ್ಯ ಲಕ್ಷಣವೇ ಆಗಿದೆ. ಮಾನವ ಸಮಾಜದಲ್ಲಿ ಜಗತ್ತಿನಾದ್ಯಂತ ಕೌಟುಂಬಿಕ ವಿಘಟನೆಗೆ ಏಕತಾನತೆಯೇ ಕಾರಣವೆಂಬುದು ಪ್ರಕಟಗೊಂಡ, ಸ್ಥಾಪಿಸಲ್ಪಟ್ಟ ಸತ್ಯವೇ ಆಗಿದೆ. ಹಾಗಾಗಿಯೇ ಕೌಟುಂಬಿಕ ನೆಲೆಗಟ್ಟಿನಲ್ಲಿ ಪರಸ್ಪರ ಗಂಡು ಹೆಣ್ಣು ಒಟ್ಟಿಗೆ ಬದುಕುತ್ತಿದ್ದರೂ, ಅವರು ಬೇರೆ ಬೇರೆ ದೇಹಗಳನ್ನು ಬಯಸುತ್ತಿರುತ್ತಾರೆ. ನಾನು ಮತ್ತು ಆಶಾ ಬೆಂಗತಮಲೆ ಕೂಡ ಇಂಥ ದೇಹಗಳೇ ಆಗಿದ್ದೇವೆ. ಬೆಂಗತಮಲೆ ಎಂಬುದು ಕರ್ನಾಟಕ ಕರಾವಳಿಯ ದಟ್ಟ ಕಾನನದ ನಡುವಿನ ಒಂದು ಊರಿನ ಹೆಸರು. ಹೆಸರಿನ ಜೊತೆಗೆ ಊರಿನ ಹೆಸರು ಸೇರಿಸಿಟ್ಟುಕೊಳ್ಳುವುದು ಎಂಥಾ ಮಜಾ. ಹೆಸರು ಮತ್ತು ಊರುಗಳ ಮಧ್ಯೆ ಪರಸ್ಪರ ಶಕ್ತಿ ಮತ್ತು ಸೊಗಸು ಎರಡೂ ನಿರಂತರ ಪ್ರತಿಫಲನಗೊಳ್ಳುತ್ತಿರುತ್ತವೆ! (ಸಶೇಷ)